ಎಲ್ಲಿ ಪರಿಣಿತರು ಆಗಿದ್ದಾರೆ, ಅಲ್ಲಿ ಆ ಡಿಪಾರ್ಟ್‌ಮೆಂಟ್ ಅಭಿವೃದ್ಧಿ ಮಾಡಿ ಅಲ್ಲಿ ಕೆಲಸ ಮಾಡಬೇಕೇ ಹೊರತು ನಾನು ಇನ್ನೊಂದು ಆಸ್ಪತ್ರೆಗೆ ಓ.ಓ.ಡಿ ಮಾಡುತ್ತೇನೆ ಎಂದರೆ ಆಗುವುದಿಲ್ಲ. ಪಿ.ಹೆಚ್.ಸಿ. ಯಲ್ಲಿ ಇವತ್ತು ಅನೇಕ ಜನ ಎಂ.ಎಸ್., ಎಂ.ಡಿ. ಮಾಡಿದ್ದಾರೆ. ಅವರಿಗೆ ಹಳ್ಳಿಗಳಲ್ಲಿ ಕೆಲಸ ಮಾಡಬೇಡಿ ಎಂದು ಯಾರೂ ಹೇಳುವುದಿಲ್ಲ. ಹಳ್ಳಿ ಜನರಿಗೂ ಅವರ ಅವಶ್ಯಕತೆ ಇದೆ. ಅಲ್ಲಿ ಕೂಡ ಅವರು ಕೆಲಸ ಮಾಡಲಿ ಎನ್ನುವ ದೃಷ್ಟಿಯಿಂದ ಅವರಿಗೆ ನಾವು ಸಂಬಳ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಿ, ಅವರನ್ನು ಪಿ.ಜಿ. ಪೋಸ್ಟ್ ಮಾಡಿಸುತ್ತಿದ್ದೇವೆ. ಪಿ.ಜಿ. ಮಾಡಿದ ನಂತರ ಅವರು ನಾವು ದೊಡ್ಡ ಆಸ್ಪತ್ರೆಗೆ ಹೋಗುತ್ತೇವೆ, ಹಳ್ಳಿಗಳಿಗೆ ಹೋಗುವುದಿಲ್ಲವೆಂದರೆ ನಾವು ಪಿ.ಜಿ. ಮಾಡಿಸಿ ಏನು ಪ್ರಯೋಜನ?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವೇ ನಿಯಮವನ್ನು ಮಾಡಿದ್ದೀರಿ. ಆರು ವರ್ಷ ಆದಮೇಲೆ ಇಂತಿಂತಹ ಸ್ಪೆಷಲೈಸ್ಡ್ ಆದಮೇಲೆ ಇಂತಹ ಕೆಟಗರಿ ಆಸ್ಪತ್ರೆಯಲ್ಲೇ ಇರಬೇಕೆಂದು ಮಾಡಿದ್ದೀರಿ. ಇದು ಉತ್ತರ ಸಮರ್ಪಕವಾಗಿಲ್ಲ. ಆರು ವರ್ಷವಾದಮೇಲೆ ನೀವು ಹಳ್ಳಿಗಳಲ್ಲಿ ಇಡುವುದಿಲ್ಲ. ಪಿ.ಹೆಚ್.ಸಿ.ಗೆ ಹಾಕುತ್ತೀರಿ. ಸೂಪರ್ ಸ್ಪೆಷಲೈಸ್ಡ್ ಮಾಡಿಕೊಂಡು ಬಂದವನನ್ನು ಜನರಲ್ ಆಸ್ಪತ್ರೆಗೆ ಹಾಕುತ್ತೇವೆ ಎಂದು ಮಾಡಿದ್ದೀರಿ. ಆ ನಿಯಮಗಳನ್ನು ಎಲ್ಲಾ ನೀವೇ ರಚನೆ ಮಾಡಿ 3 ವರ್ಗ 4 ವರ್ಗ ಡಾಕ್ಟರ್‌ಗಳನ್ನು ಮಾಡಿ ಇವತ್ತು ಅಲ್ಲಿ ಇರುತ್ತಾನೆ ಎಂದು ಹೇಗೆ ಹೇಳುತ್ತೀರಿ? 12 ವರ್ಷವಾದಮೇಲೆ ಅವನು ದೊಡ್ಡ ಆಸ್ಪತ್ರೆಗೆ ಶಿಫ್ಟ್ ಆಗೇ ಆಗುತ್ತಾನೆ. ಕಾಲೇಜಿನಲ್ಲಿ ಇರುವವರಿಗೂ ಏಕೆ ಶಿಫ್ಟ್ ಮಾಡಬಾರದು ಎಂದು ಕೇಳುತ್ತಿರುವುದು. ಆಸ್ಪತ್ರೆಯಲ್ಲಿ ಮಾಡುವುದಕ್ಕಾಗುತ್ತದೆ. ಕಾಲೇಜುಗಳಲ್ಲಿ ಇರುವವರಿಗೆ ಏಕೆ ಮಾಡುತ್ತಿಲ್ಲ?

ಡಾ|| ಎಂ. ಶಂಕರನಾಯಕ್ : ಆಸ್ಪತ್ರೆಯಲ್ಲಿ ಮಾಡತಕ್ಕಂಥ ಕೆಲಸ ಬೇರೆ. ಕಾಲೇಜಿನಲ್ಲಿ ಮಾಡತಕ್ಕಂಥ ಕೆಲಸ ಬೇರೆ. ಕಾಲೇಜಿನಲ್ಲಿ ಪಾಠ ಮಾಡಬೇಕು. ಅವರು 20-25 ವರ್ಷ ಪಿ.ಹೆಚ್.ಸಿ. ಯಲ್ಲಿ ಕೆಲಸ ಮಾಡಿ ಎಕ್ಸ್‌ಪೀರಿಯನ್ಸ್ ಆಗಿ ಸೀನಿಯರ್ ಆಗಿರುತ್ತಾರೆ. ನನಗೆ ಅಲ್ಲಿ ಪ್ರೊಪೆಸರ್ ಆಗಿ ಹಾಕಿ ಎಂದರೆ ಅವರಿಗೆ ಪಾಠ ಹೇಳತಕ್ಕಂಥ ಅರ್ಹತೆ ಬೇಕಲ್ಲಾ. ದಿನನಿತ್ಯ ಪಾಠ ಹೇಳುವಾಗ ಏನು ಬದಲಾವಣೆಯಾಗಿದೆ ಎನ್ನುವುದನ್ನು ಹೇಳಿದಾಗ ಮಾತ್ರ ಕಲಿಯುವುದಕ್ಕೆ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ಎಗ್ಸಾಮ್ಸ್‌ಗೆ ಕುಳಿತುಕೊಳ್ಳುವುದಕ್ಕೆ ಅರ್ಹತೆ ಬರುತ್ತದೆ. ಇಲ್ಲಿ ಪಿ.ಹೆಚ್.ಸಿ.ಯಲ್ಲಿ ಚಿಕಿತ್ಸೆ ಮಾಡಿ ಅವರಿಗೆ ಪಾಠ ಹೇಳುವುದಕ್ಕೆ ಆಗದೇ ಇರುವವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿದರೆ ಅವರು ಎಷ್ಟರಮಟ್ಟಿಗೆ ಪಾಠ ಮಾಡಬಹುದು?

ರಾಜ್ಯದಲ್ಲಿ ಸಂಚಾರಿ ಗ್ರಂಥಾಲಯ

150 - ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಂಚಾರಿ ಗ್ರಂಥಾಲಯಗಳು ಒಟ್ಟು ಎಷ್ಟು?

ಅ) ಇದರ ನಿರ್ವಹಣಾ ವೆಚ್ಚವೆಷ್ಟು ?

ಇ) ಇದರಲ್ಲಿ ಎಷ್ಟು ಜನರು ಉಪಯೋಗ ಪಡೆಯುತ್ತಿದ್ದಾರೆ ?

ಈ) ಇಷ್ಟು ದುಬಾರಿ ಹಣ ಖರ್ಚು ಮಾಡುವುದಕ್ಕಿಂತ ಸಾರ್ವಜನಿಕ ಗ್ರಂಥಾಲಯದ ಕಛೇರಿ ತೆರೆಯುವುದು ಉಚಿತವಲ್ಲವೇ ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) 14

ಆ) ವಾರ್ಷಿಕ ಅಂದಾಜು ರೂ. 4,64,000-00

ಇ) ದಿನಂ ಪ್ರತಿ ಸರಾಸರಿ 1750 ಫಲಾನುಭವಿಗಳು

ಈ) ಪ್ರತಿ ವಿಭಾಗದಲ್ಲೂ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಗ್ರಂಥಾಲಯಕ್ಕೆ ಬಂದು ಪುಸ್ತಕಗಳನ್ನು ಓದುವುದು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರಿಗೂ ಓದುವ ಹವ್ಯಾಸ ಬೆಳೆಸುವುದು ಮತ್ತು ಜ್ಞಾನಾರ್ಜನೆ ಬೆಳೆಸಿಕೊಳ್ಳಲು ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಮತ್ತು ಮಹಿಳೆಯರು, ವೃದ್ಧರು, ಮತ್ತು ಹೆಣ್ಣುಮಕ್ಕಳು ಇವರಿಗೆ ಮನೆಯ ಬಾಗಿಲಿಗೆ ಗ್ರಂಥಾಲಯ ಸೌಲಭ್ಯ ಒದಗಿಸುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಗ್ರಂಥಾಲಯಗಳನ್ನು ಪ್ರಾರಂಭಿಸುವುದರಿಂದ ಖರ್ಚು ಸಹ ಹೆಚ್ಚಾಗುತ್ತದೆ ಎಂದು ಅಂದಾಜು ಮಾಡಿದೆ. ಆದ್ದರಿಂದ ಸಂಚಾರಿ ಗ್ರಂಥಾಲಯಗಳು ಸಾರ್ವಜನಿಕರಿಗೆ ಹೆಚ್ಚು ಉಪಯೋಗಕರವಾಗಿರುತ್ತವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಸಂಚಾರಿ ಗ್ರಂಥಾಲಯ ಒಟ್ಟು 14 ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಸುಮಾರು 6ಕ್ಕೂ ಮಿಕ್ಕಿ ಗ್ರಂಥಾಲಯಗಳು ವಾಹನ ಕೆಟ್ಟು ಹೋಗಿರುವುದರಿಂದ ಅವುಗಳು ಅವ್ಯವಸ್ಥೆಯಲ್ಲಿದೆ ಎನ್ನುವ ಮಾಹಿತಿಗಳು ಬಂದಿವೆ. ಇದಲ್ಲದೆ ದಿನಂಪ್ರತಿ ಸರಾಸರಿ 1,750 ಫಲಾನುಭವಿಗಳು ಉಪಯೋಗ ಪಡೆಯುತ್ತಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಒಟ್ಟು 1,750 ಎಂದರೆ ಕಡಿಮೆ ಪಕ್ಷ ಒಂದು ಗ್ರಂಥಾಲಯದಿಂದ ನೂರು ಫಲಾನುಭವಿಗಳೂ ಕೂಡ ಪ್ರಯೋಜನ ಪಡೆಯುತ್ತಿಲ್ಲ. ಒಂದು ಕಡೆ 10 ಲಕ್ಷ ರೂಪಾಯಿಗೂ ಜಾಸ್ತಿ ವಾಹನಕ್ಕೆ ಖರ್ಚು ಮಾಡಿ ಅದರಲ್ಲಿ ಕೊಂಡುಕೊಳ್ಳುವಂತಹ ಪುಸ್ತಕ ಏನಿದೆ, ಅವುಗಳಲ್ಲಿ ಕೊಂಡಂತಹ ಪುಸ್ತಕಗಳನ್ನೇ ಕೊಳ್ಳುತ್ತಿದ್ದಾರೆ ಎಂದು ಸಾಕಷ್ಟು ಆರೋಪ ಇದೆ. ಡೈರೆಕ್ಟರ್ ಅಲ್ಲಿ ಪರ್‌ಚೇಸ್ ಮಾಡಿದ್ದನೇ ಕಮಿಷನ್ ಕೊಡುತ್ತಾರೆಂದು ತೆಗೆದುಕೊಂಡು, ಹೊಸ ಹೊಸ ಪುಸ್ತಕಗಳ ಸೌಲಭ್ಯ ಇಲ್ಲದೆ ಇರುವುದರಿಂದ ಸಾಕಷ್ಟು ಪ್ರಯೋಜನ ಇದರಿಂದ ಆಗುತ್ತಿಲ್ಲವೆನ್ನುವ ಮಾಹಿತಿ ಬಂದಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ಕೃಷ್ಣಪ್ಪ : ಒಟ್ಟು 14 ಸಂಚಾರಿ ಗ್ರಂಥಾಲಯಗಳಿಂದ 4,64,000-00 ರೂ. ಖರ್ಚು ಬರುತ್ತದೆ. ಈಗ ಎಲ್ಲೆಲ್ಲಿ ಸಂಚಾರಿ ಗ್ರಂಥಾಲಯ ಕಳುಹಿಸುತ್ತಿದ್ದೇವೆ. ಅಂತಹ ಸ್ಥಳಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಗ್ರಂಥಾಲಯ ಮಾಡುವುದಕ್ಕೆ ಹೆಚ್ಚು ಖರ್ಚು

ಬರುತ್ತದೆ. ಹೆಚ್ಚು ಹಣ ಖರ್ಚುಗಾಗುತ್ತದೆ ಎನ್ನುವ ಕಾರಣದಿಂದ ಈ ವ್ಯವಸ್ಥೆ ಮಾಡಿರುವುದು. ಹಿಂದಿನ ಕಾಲದಲ್ಲಿ ಕೂಡ ಪುಸ್ತಕಗಳನ್ನು ಗಾಡಿಯಲ್ಲಿ ತೆಗೆದುಕೊಂಡು ಮನೆಮನೆಗೆ ಕೊಟ್ಟು ಅವರು ಓದಿ ಮುಗಿಸಿದ ಮೇಲೆ ಎಂಟು ದಿವಸಕ್ಕೆ ವಾಪಸ್ಸು ತರುವಂತಹ ಪದ್ಧತಿ 100-200 ವರ್ಷದಿಂದಲೂ ಕೂಡ ಇದೆ. ಈ ಪದ್ಧತಿಗೆ ಅನುಗುಣವಾಗಿ ಆಧುನಿಕವಾಗಿ ಸಂಚಾರಿ ಗ್ರಂಥಾಲಯ ಮಾಡಿರುವಂತಹ ವ್ಯವಸ್ಥೆಯಾಗಿದೆ. ಇನ್ನು ಪುಸ್ತಕ ಖರೀದಿ ಮಾಡುವುದರಲ್ಲಿ ಅನ್ಯಾಯವಾಗಿದ್ದರೆ ನನಗೆ ಅದರ ಬಗ್ಗೆ ಮಾಹಿತಿ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೇ,14 ಗ್ರಂಥಾಲಯಗಳಲ್ಲಿ 6 ಗ್ರಂಥಾಲಯಗಳು ವ್ಯವಸ್ಥಿತವಾಗಿಲ್ಲವೆಂದು, ವಾಹನ ಕೆಟ್ಟು ಎಲ್ಲೋ ನಿಂತು ಹೋಗಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಕೃಷ್ಣಪ್ಪ : 14 ಸಂಚಾರಿ ವಾಹನಗಳು ಕೆಲಸ ಮಾಡುತ್ತಿವೆ. ಸಣ್ಣಪುಟ್ಟ ರಿಪೇರಿ ಇರುವಾಗ ಒಂದೆರಡು ದಿವಸ ನಿಲ್ಲಿಸಿರುವುದು ಉಂಟು. ಎಲ್ಲಾ ವ್ಯವಸ್ಥಿತವಾಗಿ ಚೆನ್ನಾಗಿ ಕೆಲಸ ನಡೆಯುತ್ತಿದೆ.

ಶ್ರೀ ಯು.ಆರ್. ಸಭಾಪತಿ : ತಮಗೆ ಸಾಕಷ್ಟು ಮಾಹಿತಿ ಒದಗಿಸಿಲ್ಲ. ತಾವು ಮಾಹಿತಿ ಪಡೆಯಬೇಕು. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಇದರ ಬಗ್ಗೆ ತಾವು ಇನ್‌ವೆಸ್ಟಿಗೇಷನ್ ಮಾಡಬೇಕು. ಈ ಗ್ರಂಥಾಲಯದಲ್ಲಿ ಇರುವಂತಹ ಪುಸ್ತಕಗಳು ಸರಿಯಾಗಿ ಓದುವುದಕ್ಕೆ ಆಗದೇ ಇರುವಂತಹ ರೀತಿಯಲ್ಲಿ ಇದೆ. ಅಥವಾ ಇರುವಂತಹ ಪುಸ್ತಕಗಳನ್ನು ಮತ್ತೆ, ಮತ್ತೆ ಕೊಂಡುಕೊಳ್ಳುವ ರೀತಿಯಲ್ಲಿ ನಡೆಯುತ್ತಿದೆ. ಕಬ್ಬನ್ ಪಾರ್ಕ್‌ನಲ್ಲಿ ಮೂರು ಗ್ರಂಥಾಲಯಗಳು ಇವೆ. ಅದು ಎಷ್ಟು ಜನರಿಗೆ ಪ್ರಯೋಜನವಾಗುತ್ತದೆಂದು ಇನ್‌ವೆಸ್ಟಿಗೇಷನ್ ಮಾಡಬೇಕೆಂದು ನನ್ನ ಕೋರಿಕೆ.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೇ, 3-4 ತಿಂಗಳಾದ ಮೇಲೆ ಪುಸ್ತಕ ಹರಿದು ಹೋದಮೇಲೆ ಅದೇ ಪ್ರತಿಗಳನ್ನು ತೆಗೆದುಕೊಳ್ಳುವ ಪ್ರತೀತಿ ಇದೆ. ಮೂರು ಪ್ರತಿಗಳನ್ನು ಕೊಂಡುಕೊಳ್ಳುವುದಕ್ಕೆ ಮಾತ್ರ ಅವರಿಗೆ ಅಧಿಕಾರ ಉಂಟು. ಆ ರೀತಿಯಾಗಿ ಏನಾದರೂ ಹೆಚ್ಚಿಗೆ ಕೊಂಡುಕೊಂಡಿದ್ದರೆ ಅದರ ಬಗ್ಗೆ ಮಾಹಿತಿ ನನ್ನ ಕೈಗೆ ಸಿಕ್ಕಿದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪರಿಶಿಷ್ಟ ಜಾತಿ, ವರ್ಗದ ಶಾಲಾ ಕಾಲೇಜು ನೌಕರರು ಅನುದಾನ ಕೋರಿ ಧರಣಿ

151- ಶ್ರೀ ಎಸ್.ವಿ. ರವೀಂದ್ರನಾಥ (ಮಾಯಕೊಂಡ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ/ವರ್ಗದ ಶಾಲಾ ಕಾಲೇಜು ನೌಕರರು ಅನುದಾನ ನೀಡಬೇಕೆಂದು ಧರಣಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಂಸ್ಥೆಗಳಿಗೆ ಅನುದಾನಕ್ಕೊಳಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?